# ಕನ್ನಡ ಎಂದರೇನು?

‘ಕನ್ನಡ’ ಎನ್ನುವ ಶಬ್ದವನ್ನು ಭ್ರಮೆ ಅಥವಾ ಮಾಯೆ ಎನ್ನುವ ಅರ್ಥ ಹಚ್ಚಿದರೆ ಹೇಗೆ? ಹುಬ್ಬೇರಿಸುವ ಮುನ್ನ ನಿಮಗೆ ಮತ್ತೊಂದು ಪ್ರಶ್ನೆ – ‘ಎನ್ನ ಕಾಯವ ದಂಡಿಗೆಯ ಮಾಡಯ್ಯಾ’ ಎಂಬ ವಚನದಲ್ಲಿ ಬಸವಣ್ಣನವರು ವರ್ಣಿಸುತ್ತಿರುವುದು ಯಾವ ತಂತಿವಾದ್ಯವನ್ನು?

■ ಸಿ.ಎನ್. ರಾಮಚಂದ್ರನ್
ಕಲೆ: ಈಶ್ವರ್ ಬಡಿಗೇರ್




## ‘ಕನ್ನಡ’ ಎಂದರೇನು?

ಇದೆಂತಹ ಬಾಲಿಶ ಪ್ರಶ್ನೆ ಎಂದು ಎಲ್ಲರಿಗೂ ಅನಿಸಬಹುದು; ಏಕೆಂದರೆ ಎಲ್ಲರಿಗೂ ಕನ್ನಡ ಎಂದರೆ ಒಂದು ಭಾಷೆಯ ಹೆಸರು ಎಂದು ಗೊತ್ತು. ಇನ್ನು ಕೆಲವರು, ‘ಕನ್ನಡ ಎಂದರೆ ಒಂದು ಭಾಷೆ ಮಾತ್ರ ಅಲ್ಲ, ಅದೊಂದು ಸಂಸ್ಕೃತಿ, ಅದೊಂದು ಮೌಲ್ಯಗಳ ಮೊತ್ತ’ ಎಂದು ಅರ್ಥೈಸಬಹುದು. ಆದರೆ ನನ್ನ ಪ್ರಶ್ನೆಯೇ ಬೇರೆ ಸ್ವರೂಪದ್ದು ಮತ್ತು ಇದು ನನಗೆದುರಾದದ್ದು ಸರ್ವಜ್ಞನ ಕೆಲವು ವಚನಗಳನ್ನು ಇಂಗ್ಲಿಷ್‌ಗೆ ಅನುವಾದಿಸುತ್ತಿದ್ದಾಗ.

ಇತ್ತೀಚಿನವರೆಗೂ ನಾನು ಸರ್ವಜ್ಞನ ವಚನಗಳನ್ನು ಅರ್ಥಮಾಡಿಕೊಳ್ಳಲು ಹಾಗೂ ಅನುವಾದಿಸಲು ತುಂಬಾ ಸುಲಭ ಎಂದುಕೊಂಡಿದ್ದೆ. ಆದರೆ, ಅದು ಭ್ರಮೆ; ಎಲ್ಲಾ ರಚನೆಗಳು ಒಂದಲ್ಲಾ ಒಂದು ನೆಲೆಯಲ್ಲಿ ಅರ್ಥೈಸಲು ಹಾಗೂ ಅನುವಾದಿಸಲು ಕ್ಲಿಷ್ಟವೇ ಎಂಬುದನ್ನು ಅರಿತುದು ಸರ್ವಜ್ಞನ ಈ ತ್ರಿಪದಿಯನ್ನು ನಾನು ಇಂಗ್ಲಿಷ್‌ಗೆ ಅನುವಾದಿಸಲು ಪ್ರಯತ್ನಿಸಿದಾಗ:

ಜಲದೊಳಗಣ ಮೀನು ಹೊಳೆವ ಕೊಂಬಿನ ಮೇಲೆ
ಪೊಳೆವ ಗಿಳಿ ಕಂಡು ಕೊಳುತಿಕ್ಕು ಕನ್ನಡದ
ಒಳಗನಾರರಿಗು – ಸರ್ವಜ್ಞ.

ಈ ವಚನದಲ್ಲಿ ಸುಮಾರು ಎಲ್ಲಾ ಪದಗಳೂ ಸರಳವಾಗಿವೆ; ಆದರೆ ಇಲ್ಲಿ ‘ಕನ್ನಡ’ ಎಂಬ ಪದ ಏನು ಮಾಡುತ್ತಿದೆ? ಅದಕ್ಕೆ 18ನೇ ಶತಮಾನದಲ್ಲಿ ‘ಕನ್ನಡಿ’ ಎಂದೇನಾದರೂ ಅರ್ಥವಿತ್ತೆ? ಅಥವಾ, ಈ ವಚನದಲ್ಲಿ ಸರ್ವಜ್ಞ ದ್ವೈತ ಸಿದ್ಧಾಂತದ ಅಡಿಗಲ್ಲಾದ ‘ಬಿಂಬ–ಪ್ರತಿಬಿಂಬ’ ಎಂಬ ದಾರ್ಶನಿಕ ಪರಿಕಲ್ಪನೆಯನ್ನು ವಿವರಿಸುತ್ತಿದ್ದಾನೆಯೆ? ಉತ್ತರಕ್ಕಾಗಿ ಸ್ವಲ್ಪ ಹೊತ್ತು ತೊಳಲಾಡಿದ ನಂತರ, ವಿವೇಕ ರೈ ಅವರ ಬಳಿ ಈ ಸಮಸ್ಯೆಯನ್ನು ಕೊಂಡೊಯ್ದೆ.

ಅವರು ಸ್ವಲ್ಪ ಸಮಯದ ನಂತರ ಒಂದು ದೀರ್ಘ ಪತ್ರವನ್ನು ಬರೆದು, ನನ್ನ ಪ್ರಶ್ನೆಗೆ ಉತ್ತರಿಸಿದರು. ‘ಕನ್ನಡ’ ಎಂಬ ಪದಕ್ಕೆ ಕರ್ನಾಟಕದ ಜನರ ‘ಭಾಷೆ’ ಎಂದಷ್ಟೇ ಅಲ್ಲದೆ, ‘ಮಾಯೆ,’ ‘ಮಧ್ಯೆ’ (midpoint), ‘ಗಿಳಿ’ ಎಂಬ ಅರ್ಥಗಳೂ ಇವೆ. ಉದಾಹರಣೆಗಾಗಿ: ತನುಮನವೆಂಬ ಕನ್ನಡ ನೋಡಯ್ಯ / ಎನ್ನದೂ ಅಲ್ಲ, ನಿನ್ನದೂ ಅಲ್ಲ, ಬರಿಯ ಭ್ರಮೆಯ ಮಾತು – ಇಲ್ಲಿ ಬಸವಣ್ಣನವರು ‘ಕನ್ನಡ’ ಪದವನ್ನು (ಆ ವಚನದ ಕೊನೆಯಲ್ಲಿ ತಿಳಿಸುವಂತೆ) ‘ಭ್ರಮೆ’ ಎಂಬ ಅರ್ಥದಲ್ಲಿ ಉಪಯೋಗಿಸಿದ್ದಾರೆ. ಇದೇ ಅರ್ಥದಲ್ಲಿ ಚನ್ನಬಸವಣ್ಣನವರ ‘ಕಾಯವೆಂಬ ಕನ್ನಡವಿಲ್ಲ ಪ್ರಾಣವಿಲ್ಲವಾಗಿ’ ಎಂಬ ಹೇಳಿಕೆಯಲ್ಲಿಯೂ